	ತಾರಿಹಾಳ	82.50	–	84.03
	ರಾಯಪುರ	49.00	–	48.50
		1358.00	**–**	**1070.08**

ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯ ವತಿಯಿಂದ ಭೂಸ್ವಾಧೀನ

708 (549) ಶ್ರೀ ವೆಂಟಶಿವರೆಡ್ಡಿ ಜೆ.ಕೆ. (ಶ್ರೀನಿವಾಸಪುರ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ ಗ್ರಾಮಕ್ಕೆ ಸೇರಿದ ಜಮೀನುಗಳನ್ನು ಕರ್ನಾಟಕ ಕೈಗಾರಿಕಾ ಅಭಿವೃದ್ಧಿ ಮಂಡಳಿಯವರು ಕೈಗಾರಿಕಾ ಅಭಿವೃದ್ಧಿಗಾಗಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿ ವಶಪಡಿಸಿಕೊಂಡ ಜಮೀನಿನ ವಿಸ್ತೀರ್ಣವೆಷ್ಟು (ಸರ್ವೆ ನಂಬರಿನ ಸಹಿತ ಮಾಹಿತಿ ನೀಡುವುದು);

ಆ) ಅಂತಿಮ ಅಧಿಸೂಚನೆ ಹೊರಡಿಸುವಾಗ ಕೈಬಿಡಲಾದ ಜಮೀನಿನ ವಿಸ್ತೀರ್ಣವೆಷ್ಟು (ಸರ್ವೆ ನಂಬರ್ ಮತ್ತು ವಿಸ್ತೀರ್ಣವಾರು ಸಹಿತ ಮಾಹಿತಿ ನೀಡುವುದು);

ಇ) ವಶಪಡಿಸಿಕೊಳ್ಳಲಾದ ಜಮೀನುಗಳನ್ನು ಕೈಬಿಡಲು ಕಾರಣಗಳೇನು (ಮಾಹಿತಿ ನೀಡುವುದು);

ಈ) ವಶಪಡಿಸಿಕೊಳ್ಳಲಾದ ಜಮೀನುದಾರರಗೆ ನೀಡಲಾಗಿರುವ ಪರಿಹಾರದ ಮೊತ್ತವೆಷ್ಟು?

ಶ್ರೀ ಮುರುಗೇಶ್ ಆರ್. ನಿರಾಣಿ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು) :

ಅ) ಬೆಂಗಳೂರು ಜಿಲ್ಲೆ, ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿ, ಅಮಾನಿ ಬೆಳ್ಳಂದೂರು ಖಾನೆ, ಕರಿಯಮ್ಮನ ಅಗ್ರಹಾರ, ದೇವರಬೀಸನಹಳ್ಳಿ ಮತ್ತು ಬೆಳ್ಳಂದೂರು ಗ್ರಾಮಗಳಲ್ಲಿ ಮಂಡಳಿಯ ಕೈಗಾರಿಕಾ ಪ್ರದೇಶಕ್ಕಾಗಿ ಕಲಂ 3(1), 1(3) ಮತ್ತು 28(1) ರಂತೆ $451–30^{1/2}$ ಎಕರೆ ಜಮೀನನ್ನು ಕೈಗಾರಿಕಾ ಅಭಿವೃದ್ಧಿಗಾಗಿ

ವಶಪಡಿಸಿಕೊಂಡಿದೆ. ಈ ಪೈಕಿ ಅಮಾನಿಬೆಳ್ಳಂದೂರುಖಾನೆ ಗ್ರಾಮಕ್ಕೆ ಸೇರಿದ ಒಟ್ಟು 242–03 ಎಕರೆ ಜಮೀನು ಸೇರಿರುತ್ತದೆ.

ಗ್ರಾಮದ ಹೆಸರು	ವಿಸ್ತೀರ್ಣ ಎ – ಗು
ದೇವರಬೀಸನಹಳ್ಳಿ	65–16 1/2
ಬೆಳ್ಳಂದೂರು	34–31
ಅಮಾನಿಬೆಳ್ಳಂದೂರು ಖಾನೆ	15–08
ಕರಿಯಮ್ಮನ ಅಗ್ರಹಾರ	48–10
ಒಟ್ಟು	**163–25 1/2**
ಅಮಾನಿಬೆಳ್ಳಂದೂರು ಖಾನೆ	62–00
ಕರಿಯಮ್ಮನ ಅಗ್ರಹಾರ	17–22
ಕಾಡುಬೀಸನಹಳ್ಳಿ	23–22
ಒಟ್ಟು	**103–04**
ಅಮಾನಿಬೆಳ್ಳಂದೂರು ಖಾನೆ	129–10
ಕರಿಯಮ್ಮನ ಅಗ್ರಹಾರ	15–12
ದೇವರಬೀಸನಹಳ್ಳಿ	2–29
ಬೆಳ್ಳಂದೂರು	2–05
ಒಟ್ಟು	149–16
ಅಮಾನಿಬೆಳ್ಳಂದೂರು ಖಾನೆ	35–25
ಒಟ್ಟು	35–25
ಜುಮ್ಲಾ	451–30 1/2

ಭೂಸ್ವಾಧೀನಪಡಿಸಿರುವ ಜಮೀನಿನ ಭೂಮಾಲೀಕರ ಹೆಸರು, ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಅಂತಿಮ ಅಧಿಸೂಚನೆ ಹೊರಡಿಸುವಾಗ ಕೈಬಿಡಲಾದ ಜಮೀನಿನ ವಿಸ್ತೀರ್ಣ 178–19 3/4 ಎಕರೆ ಈ ಪೈಕಿ ಅಮಾನಿಬೆಳ್ಳಂದೂರು ಖಾನೆ ಗ್ರಾಮದಲ್ಲಿ ಭೂಸ್ವಾಧೀನದಿಂದ ಕೈಬಿಟ್ಟಿರುವ ಜಮೀನಿನ ವಿಸ್ತೀರ್ಣ 96–01 ಎಕರೆ. ವಿವರ ಈ ಕೆಳಕಂಡಂತೆ ಇರುತ್ತದೆ.

ಕ್ರ ಸಂ.	ಗ್ರಾಮದ ಹೆಸರು	ವಿಸ್ತೀರ್ಣ ಎ–ಗು
1	ದೇವರಬೀಸನಹಳ್ಳಿ, ಬೆಳ್ಳಂದೂರು (ಅಂತಿಮ ಅಧಿಸೂಚನೆ ಪೂರ್ವದಲ್ಲಿ ಕೈಬಿಟ್ಟಿರುವುದು)	15–04
2	ದೇವರಬೀಸನಹಳ್ಳಿ, ಬೆಳ್ಳಂದೂರು, ಕರಿಯಮ್ಮನ ಅಗ್ರಹಾರ (ಅಂತಿಮ ಅಧಿಸೂಚನೆ ಪೂರ್ವದಲ್ಲಿ ಕೈಬಿಟ್ಟಿರುವುದು)	20–17 3/4
3	ಕಾಡುಬೀಸನಹಳ್ಳಿ (ಅಂತಿಮ ಅಧಿಸೂಚನೆ ಪೂರ್ವದಲ್ಲಿ ಕೈಬಿಟ್ಟಿರುವುದು)	2–33
4	ಅಮಾನಿ ಬೆಳ್ಳಂದೂರು ಖಾನೆ (ಅಂತಿಮ ಅಧಿಸೂಚನೆ ಪೂರ್ವದಲ್ಲಿ ಕೈಬಿಟ್ಟಿರುವುದು)	80–33
	ಒಟ್ಟು	**119–07**

ಭೂಸ್ವಾಧೀನ ಕ್ರಮದಿಂದ ಕೈಬಿಟ್ಟಿರುವ ಜಮೀನಿನ ಸರ್ವೆ ನಂಬರ್ ಮತ್ತು ವಿಸ್ತೀರ್ಣದ ವಿವರಗಳನ್ನು ಅನುಬಂಧ–2 ರಲ್ಲಿ ಲಗತ್ತಿಸಿದೆ.

ii) ಕ್ರಮ ಸಂಖ್ಯೆ 1 ರಿಂದ 3ರವರೆಗಿನ ಅಧಿಸೂಚನೆಯಲ್ಲಿ ವಿವರಿಸಿರುವ ಜಮೀನುಗಳು ಸರ್ಕಾರಕ್ಕೆ ಅವಶ್ಯಕತೆ ಇಲ್ಲದ ಕಾರಣ ಭೂಸ್ವಾಧೀನ ಕ್ರಮದಿಂದ ಕೈಬಿಡಲಾಗಿದೆ.

ಕ್ರಮ ಸಂಕ್ಯೆ 4 ರಲ್ಲಿ ಕೈಬಿಟ್ಟಿರುವ ಜಮೀನುಗಳು ಸರ್ಕಾರದ ನಗರಾಭಿವೃದ್ಧಿ ಇಲಾಖೆಯಿಂದ ತಯಾರಿಸಿರುವ ಸಿ.ಡಿ.ಪಿ. ಮಾಸ್ಟರ್ ಪ್ಲಾನ್ ನಲ್ಲಿ ಅಮಾನಿಬೆಳ್ಳಂದೂರು ಖಾನೆ ಗ್ರಾಮಕ್ಕೆ ಸೇರಿದ 80–33 ಎಕರೆ ಜಮೀನು ವ್ಯಾಲಿಜೋನ್ ಎಂದು ಗುರುತಿಸಿರುವುದರಿಂದ ಸದರಿ ಜಮೀನನ್ನು ಭೂಸ್ವಾಧೀನ ಕ್ರಮದಿಂದ ಕೈಬಿಡಲಾಗಿದೆ.

ಈ) ಭೂಸ್ವಾಧೀನಪಡಿಸಿರುವ ಅಮಾನಿ ಬೆಳ್ಳಂದೂರು ಖಾನೆ, ಕಾಡುಬೀಸನಹಳ್ಳಿ ಮತ್ತು ಕರಿಯಮ್ಮನ ಅಗ್ರಹಾರ ಗ್ರಾಮಗಳ 97–00 ಎಕರೆ ಜಮೀನಿಗೆ ಎಕರೆ ಒಂದಕ್ಕೆ 65.00 ಲಕ್ಷದಂತೆ ಪರಿಹಾರ ಧನ ನಿಗಧಿಪಡಿಸಿದೆ.

ಬೆಂಗಳೂರು ಜಲಮಂಡಳಿಗೆ ಸ್ವಾಧೀನಪಡಿಸಿರುವ 35–35 ಎಕರೆ ಜಮೀನಿನ ಪೈಕಿ 20–25 ಎಕರೆ ಜಮೀನಿಗೆ ಸಂಬಂಧಿಸಿದಂತೆ ಭೂಮಾಲೀಕರು ಒಪ್ಪಂದದ ದರಕ್ಕೆ ಒಪ್ಪದ ಕಾರಣ ಭೂಸ್ವಾಧೀನ ಕಾಯ್ದೆ 1894 ರಡಿ ಸಾಮಾನ್ಯ ಐತೀರ್ಪು ರಚಿಸಿದ್ದು, ಎಕರೆ ಂದಕ್ಕೆ ರೂ.35.00 ಲಕ್ಷ ಮತ್ತು ಶಾಸನಬದ್ದ ಸೌಲಭ್ಯಗಳು ಸೇರಿದಂತೆ ಒಟ್ಟು ರೂ.11,83,51,703–00 ಗಳ ಪರಿಹಾರವನ್ನು ಭೂಮಾಲೀಕರಿಗೆ ಪಾವತಿಸಲಾಗಿದೆ. ಉಳಿದ 15–10 ಎಕರೆ ಜಮೀನಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣಗಳು ಬಾಕಿ ಇದ್ದು, ಇತ್ತೀಚೆಗೆ ಇತ್ಯರ್ಥವಾಗಿದ್ದು, ಅವಾರ್ಡ್ ರಚಿಸಲು ಕ್ರಮವಹಿಸಲಾಗುತ್ತಿದೆ.

ಜನಸ್ಪಂದನ ಕಾರ್ಯಕ್ರಮ

690 (1215). ಶ್ರೀ ಸಂಪಂಗಿ. ಎನ್ (ಬಾಗೇಪಲ್ಲಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 2 ವರ್ಷಗಳಲ್ಲಿ ಬಾಗೇಪಲ್ಲಿ ಮತ್ತು ಗುಂಡಿಬಂಡೆ ತಾಲ್ಲೂಕುಗಳಲ್ಲಿ ಎಲ್ಲೆಲ್ಲಿ ಜನಸ್ಪಂದನ ಕಾರ್ಯಕ್ರಮ ನಡೆದಿರುತ್ತದೆ. ಯಾವ ಯಾವ ಇಲಾಖೆಗೆ ಸೇರಿದ ಹಾಗೂ ವಿಲೇವಾರಿ ಆದ ಅರ್ಜಿಗಳೆಷ್ಟು;

ಆ) ಬಾಗೇಪಲ್ಲಿ ವಿಧಾನಸಭಾ ಕ್ಷೇತ್ರದ ಗುಂಡಿಬಂಡೆ ತಾಲ್ಲೂಕುಗಳಲ್ಲಿ ಮಿನಿ ವಿಧಾನಸೌಧ ಪ್ರಾರಂಭಿಸುವ ಉದ್ದೇಶ ಸರ್ಕಾರದ ಮುಂದಿರುವುದೇ;

ಇ) ಇದ್ದಲ್ಲಿ ಎಂದು ಪ್ರಾರಂಭ ಮಾಡಲಾಗುವುದು ಹಾಗೂ ಅದಕ್ಕಾಗಿ ಮೀಸಲಾಗಿರಿಸುವ ಹಣವೆಷ್ಟು?

ಶ್ರೀ ಜಿ. ಕರುಣಾಕರ ರೆಡ್ಡಿ (ಕಂದಾಯ ಸಚಿವರು) :

ಅ) ಕಳೆದ 2 ವರ್ಷಗಳಲ್ಲಿ ಬಾಗೆಪಲ್ಲಿ ಮತ್ತು ಗುಂಡಿಬಂಡೆ ತಾಲ್ಲೂಕುಗಳಲ್ಲಿ ಜನಸ್ಪಂದನ ಕಾರ್ಯಕ್ರಮಗಳು ನಡೆದಿರುವ ಸ್ಥಳಗಳ ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.